**ಅಸಲು ದಾವಾ ನಂಃ 137/2022**
**ಪಿ.ಡಬ್ಲ್ಯೂಃ 1,**

**ದಿನಾಂಕ :06-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು :- ಶ್ರೀ. ಸಿ.ಬಿ.ಎ. ಪ್ರತಿವಾದಿ ಪರ ವಕೀಲರಿಂದ :**

ದಾವಾ ಆಸ್ತಿಯನ್ನು ಖರಿದಿಸುವಾಗ ಅದನ್ನು ಅಳತೆ ಮಾಡಿ ಖರಿದಿಸಿಲ್ಲಾ, ಆದರೆ ಪಹಣಿಯನ್ನು ನೋಡಿ ಖರಿದಿಸಿದ್ದೇವೆ. ದಾವಾ ಸ.ನ. ದಲ್ಲಿ ಪ್ರತಿವಾದಿಯು 1 ಎಕರೆ ಒಂದು ಸಲ ಮೊತ್ತೊಂದು ಸಲ 1 ಎಕರೆ ಭೂ ಪರಿವರ್ತನೆಯಾದ ಜಮೀನನ್ನು 28 ವರ್ಷಗಳ ಹಿಂದೆ ಖರಿದಿ ಮಾಡಿದ್ದಾರೆ ಎಂದರೆ ಸರಿ. ಪ್ರತಿವಾದಿ ತಾನು ಖರಿದಿಸಿದ ಜಮೀನನಲ್ಲಿ ಕಂಪೌಂಡ ಹಾಕಿ ಫ್ಯಾಕ್ಟರಿ ಚಲಾಯಿಸುತ್ತಿದ್ದಾರೆ ಎಂದರೆ ಸರಿ. ನಾವು ಜಮೀನನ್ನು ಖರಿದಿಸಿದಕ್ಕಿಂತ ಮುಂಚೆ ಪ್ರತಿವಾದಿ ತಾನು ಖರಿದಿಸಿದ ಜಮೀನದಲ್ಲಿ ಕಂಪೌಂಡ ಹಾಕಿ ಫ್ಯಾಕ್ಟರಿ ನಡೆಸುತ್ತಿದ್ದ ಎಂದರೆಸರಿ . ನಾವು ಖರಿದಿಸಿದ ಜಮೀನುದಲ್ಲಿ ಅತಿಕ್ರಮಣ ಆಗಿದೆ ಎಂದು ನಾವು ಅಳತೆ ಮಾಡಿ ವರದಿ ಸಲ್ಲಿಸಿದ್ದೇವೆ. ಸರ್ವೆ ಮಾಡುವ ಕಾಲಕ್ಕೆ ನಾನು ಸಲ್ಲಿಸಿದ ಅರ್ಜಿಯ ಒಂದು ಪ್ರತಿಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನಾನು ಅಳತೆ ಸಲುವಾಗಿ ಅರ್ಜಿ ಸಲ್ಲಿಸಿದ್ದೇನೆಂದು ಅಳತೆ ಕಛೇರಿಯವರು ನನಗೆ ಹಿಂಬರ ನೀಡಿದ ಪ್ರತಿಯನ್ನು ಸಲ್ಲಿಸಿದ್ದೇನು ಗೊತ್ತಿಲ್ಲಾ ನನ್ನ ಗಂಡನಿಗೆ ಗೊತ್ತು. ನಾನು ಖರಿದಿದ ಜಮೀನನ್ನು ಭೂ ಪರಿವರ್ತನೆ ಮಾಡಲು ಅರ್ಜಿ ಸಲ್ಲಿಸಿದ್ದು, ಅದರಲ್ಲಿ 3 ಎ 24 ಗು ಭೂ ಪರಿವರ್ತನೆ ಮಾಡಿ ಆದೇಶ ಮಾಡಿರುತ್ತಾರೆ. ನಾವು ಭೂ ಪರಿವರ್ತನೆ ಮಾಡಿದ ಜಮೀನಿನ ಪಶ್ವಿಮ ದಿಕ್ಕಿನಲ್ಲಿ ಪ್ರತಿವಾದಿಯ ಫ್ಯಾಕ್ಟರಿ ಇದೆ. ನನ್ನ 2 ಎಕರೆ ಜಮೀನು ಪ್ರತಿವಾದಿ ಜಮೀನಿಗೆ ಯಾವುದೇ ಗಡಿ ಹತ್ತುವುದಿಲ್ಲಾ. ಇನ್ನುಳಿದ 1 ಎಕರೆ 24 ಗುಂಟೆ ಪ್ರತಿವಾದಿಯ ಜಮೀನಿನ ದಕ್ಷಿಣ ದಿಕ್ಕಿಗೆ ಬರುತ್ತದೆ. ನನ್ನ ಜಮೀನನ್ನು ಪ್ರತಿವಾದಿಯು ಯಾವುದೇ ರೀತಿಯಲ್ಲಿ ಅತಿ ಕ್ರಮಣ ಮಾಡಿಲ್ಲಾ

ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ಜಮೀನನ್ನು ಅತಿ ಕ್ರಮಣ ಮಾಡಿದ್ದಾನೆಂದು ನಕ್ಷೆಯನ್ನು ಹಾಜರು ಪಡಿಸಿದ್ದೇನೆ. ನನ್ನ ಜಮೀನನ್ನು ಪ್ರತಿವಾದಿ ಅತಿ ಕ್ರಮಣ ಮಾಡಿದ್ದಾನೆಂದು ಯಾವುದೇ ಅಧಿಕೃತ ದಾಖಲೆಯನ್ನು ಸಲ್ಲಿಸಿಲ್ಲಾ ಎಂದರೆ ಸರಿಯಲ್ಲ .

**( ಈ ಹಂತದಲ್ಲಿ ಹೆಚ್ಚಿನ ಪಾಟಿ ಸವಾಲಿಗಾಗಿ ವಕೀಲರು ಕಾಲವಕಾಶ ಕೋರಿದ್ದು, ಪಾಟಿ ಸವಾಲು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**